ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯದ ವರದಿ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ವಾಣಿ ದಿನಾಂಕ : DATE : 2/12/2019


# ಶರದ್ ಪವಾರ್‌ಗೆ

## ಮೈತ್ರಿ ಸರ್ಕಾರದಲ್ಲಿ ಪ್ರಭಾವಿ ಖಾತೆ ಎನ್‌ಸಿಪಿಗೆ | ಅಜಿತ್ ಡಿಸಿಎಂ?



ಮುಂಬೈ: ಮಹಾರಾಷ್ಟ್ರ ವಿಕಾಸ ಆಘಾಡಿ (ಎಂವಿಎ) ಸರ್ಕಾರದ ಅಂಗಪಕ್ಷವಾದ ಎನ್‌ಸಿಪಿಗೆ ಮಹತ್ವದ ಖಾತೆಗಳು ದೊರೆಯುವುದು ಬಹುತೇಕ ಖಚಿತವಾಗಿದೆ. ಪಕ್ಷದ ವಿರುದ್ಧ ಬಂಡೆದ್ದು, ರಾತ್ರೋರಾತ್ರಿ ಬಿಜೆಪಿ ಜತೆ ಕೈಜೋಡಿಸಿ ನಾಲ್ಕು ದಿನದಲ್ಲೇ ವಾಪಸು ಬಂದ ಎನ್‌ಸಿಪಿಯ ಹಿರಿಯ ಮುಖಂಡ ಮತ್ತು ಶರದ್ ಪವಾರ್‌ರ ಅಣ್ಣನ ಮಗ ಅಜಿತ್ ಪವಾರ್‌ಗೆ ಉಪಮುಖ್ಯಮಂತ್ರಿ ಹುದ್ದೆ ದೊರೆಯುವ ಸಂಭವ ಇದೆ. ಅಜಿತ್‌ಗಾಗಿ ಡಿಸಿಎಂ ಹುದ್ದೆ ಬಿಟ್ಟುಕೊಡಲು ಒಪ್ಪಿರುವ ಕಾರಣ ಹಿರಿಯ ಮುಖಂಡ ಜಯಂತ್ ಪಾಟೀಲ್‌ಗೆ ಗೃಹ ಖಾತೆ ನೀಡಲಾಗುತ್ತಿದೆ ಎಂದು ಎನ್‌ಸಿಪಿ ಮೂಲಗಳು ತಿಳಿಸಿವೆ.

- ಜಯಂತ್ ಪಾಟೀಲ್‌ಗೆ ಗೃಹ ಖಾತೆ?
- ಕಂದಾಯ ಖಾತೆಗೆ ಕಾಂಗ್ರೆಸ್ ಸ್ಪರ್ಧೆ
- ಸ್ಪೀಕರ್ ಹುದ್ದೆ ಕೈ ಪಾಲು

ಕಾಂಗ್ರೆಸ್‌ಗೆ ಕಂದಾಯ ಖಾತೆ ದೊರೆಯುವ ಸಾಧ್ಯತೆ ಇದ್ದು, ಈ ಖಾತೆಗೆ ಇಬ್ಬರ ಮಧ್ಯೆ ಪೈಪೋಟಿ ಇದೆ. ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ, ಸಚಿವ ಬಾಳಾಸಾಹೇಬ್ ಥರೋಟ್ ಎಂಟನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಪಕ್ಷದ ಹಿರಿಯ ನಾಯಕ ಅಶೋಕ್ ಚವಾಣ್ ನಡುವೆ ಕಂದಾಯ ಖಾತೆಗೆ ಸ್ಪರ್ಧೆ ಇದೆ. ಶಿವಸೇನೆಗೆ ಮುಖ್ಯಮಂತ್ರಿ ಸೇರಿ 15 ಸಚಿವ ಸ್ಥಾನ, ಎನ್‌ಸಿಪಿಗೆ ಒಂದು ಉಪಮುಖ್ಯಮಂತ್ರಿ ಸೇರಿ 16 ಸಚಿವರು ಮತ್ತು ಡೆಪ್ಯುಟಿ ಸ್ಪೀಕರ್ ಹುದ್ದೆ ಹಾಗೂ ಕಾಂಗ್ರೆಸ್‌ಗೆ 12 ಸಚಿವ ಸ್ಥಾನದ ಜತೆಗೆ ಸ್ಪೀಕರ್ ಹುದ್ದೆ ಎಂದು ಹಂಚಿಕೆಯಾಗಿದೆ ಎನ್ನಲಾಗಿದೆ. ಶಿವಸೇನೆಗಿಂತ ಎನ್‌ಸಿಪಿ ಕಡಿಮೆ ಶಾಸಕರನ್ನು ಹೊಂದಿದ್ದರೂ ಹೆಚ್ಚಿನ ಸಚಿವ ಸ್ಥಾನ ಗಿಟ್ಟಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

### ಫಡ್ನವೀಸ್ ಪ್ರತಿಪಕ್ಷ ನಾಯಕ



ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ದೇವೇಂದ್ರ ಫಡ್ನವೀಸ್‌ರನ್ನು ವಿರೋಧ ಪಕ್ಷದ ನಾಯಕರೆಂದು ವಿಧಾನಸಭೆಯಲ್ಲಿ ಘೋಷಿಸಲಾಗಿದೆ. ಚುನಾವಣಾ ಪರೀಕ್ಷೆಯಲ್ಲಿ ನಮಗೆ ಶೇ. 70 ಅಂಕದೊರಕಿದೆ. ಆದರೆ, ರಾಜಕೀಯ ಅಂಕಗಣಿತದಲ್ಲಿ ಶೇ. 40 ಅಥವಾ ಅದಕ್ಕೂ ತುಸು ಹೆಚ್ಚು ಅಂಕಗಳಿಸಿದ ಮೂರು ಪಕ್ಷಗಳು ಕೂಡಿ ಸರ್ಕಾರ ರಚಿಸಿವೆ. ಪ್ರಜಾತಂತ್ರ ವ್ಯವಸ್ಥೆಯ ಭಾಗವಾಗಿ ಇದನ್ನು ಒಪ್ಪುತ್ತೇವೆ. ನೀವು (ಶಿವಸೇನೆ) ವಾಪಸು ಬರುತ್ತೀರಿ. ಆದರೆ, ಇದಕ್ಕೆ ಕೆಲವು ಕಾಲ ಕಾಯಬೇಕಾಗುತ್ತದೆ ಎಂದು ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ.

### ಪಟೋಲೆ ಸ್ಪೀಕರ್

14ನೇ ವಿಧಾನಸಭೆ ಸ್ಪೀಕರ್ ಸ್ಥಾನಕ್ಕೆ ಕಾಂಗ್ರೆಸ್‌ನ ನಾನಾ ಪಟೋಲೆ (56) ಆಯ್ಕೆ ಆಗಿದ್ದಾರೆ. ಬಿಜೆಪಿಯ ಕಿಶನ್ ಕಥೋರೆ ಕಡೆ ಕ್ಷಣದಲ್ಲಿ ನಾಮಪತ್ರ ಹಿಂಪಡೆದ ಕಾರಣ ಪಟೋಲೆ ಅವಿರೋಧವಾಗಿ ಆಯ್ಕೆಯಾದರು. ವಿದರ್ಭ ಭಾಗದ ಸಕೋಲಿ ಕ್ಷೇತ್ರದಿಂದ ಚುನಾಯಿತರಾಗಿರುವ ಪಟೋಲೆ, ನಾಲ್ಕನೇ ಬಾರಿ ವಿಧಾನಸಭೆಗೆ ಆಯ್ಕೆ ಆಗಿದ್ದಾರೆ. ಮೂಲತಃ ಕಾಂಗ್ರೆಸ್ ಮುಖಂಡರಾದ ಪಟೋಲೆ, 2014ರ ಬಿಜೆಪಿಗೆ ಸೇರಿ ಲೋಕಸಭಾ ಚುನಾವಣೆಯಲ್ಲಿ ಎನ್‌ಸಿಪಿ ನಾಯಕ ಪ್ರಫುಲ್ ಪಟೇಲ್‌ರನ್ನು ಸೋಲಿಸಿದ್ದರು. ಪ್ರಧಾನಿ ಮೋದಿ ಮತ್ತು ಸಿಎಂ ದೇವೇಂದ್ರ ಫಡ್ನವೀಸ್ ಜತೆಗಿನ ಭಿನ್ನಾಭಿಪ್ರಾಯದ ಕಾರಣ 2017ರಲ್ಲಿ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್‌ಗೆ ಮರಳಿದ್ದರು.

### ಮುನಿಸಿಕೊಂಡ ಪಂಕಜಾ ಮುಂಡೆ

ಮಾಜಿ ಸಚಿವೆ, ಬಿಜೆಪಿ ನಾಯಕಿ ಪಂಕಜಾ ಮುಂಡೆ ಬೆಂಬಲಿಗರ ಸಭೆ ಕರೆದಿದ್ದಾರೆ. ಡಿ.12ರಂದು ಪಂಕಜಾರ ತಂದೆ ಕೇಂದ್ರದ ಮಾಜಿ ಸಚಿವ ದಿವಂಗತ ಗೋಪಿನಾಥ ಮುಂಡೆಯವರ ಜನ್ಮದಿನವಾಗಿರುವ ಕಾರಣ ಅಂದೇ ಬೆಂಬಲಿಗರ ಸಭೆ ನಡೆಸಲು ನಿರ್ಧರಿಸಲಾಗಿದೆ. ಈ ಸಭೆಯಲ್ಲಿ ಪಂಕಜಾ ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನಲಾಗಿದೆ. ರಾಜ್ಯದಲ್ಲಿ ಬದಲಾದ ರಾಜಕೀಯದ ಚಿತ್ರಣದ ಕಾರಣ ಪಂಕಜಾ ಬಿಜೆಪಿ ತೊರೆಯಲಿದ್ದಾರೆ ಎಂದು ಹೇಳಲಾಗುತ್ತಿದೆ. ಕ್ಷೇತ್ರದಿಂದ ಸ್ಪರ್ಧಿಸಿದ್ದ ಪಂಕಜಾ, ತಮ್ಮ ಸಂಬಂಧಿಯಾದ ಕಾಂಗ್ರೆಸ್ ಅಭ್ಯರ್ಥಿ ಧನಜಂಯ ಮುಂಡೆ ವಿರುದ್ಧ 30 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಪರಾಭವಗೊಂಡಿದ್ದರು.



### ಹಿಂದುತ್ವ ಬಿಟ್ಟಿಲ್ಲ ಎಂದ ಉದ್ಧವ್

ಶಿವಸೇನೆ ಹಿಂದುತ್ವವನ್ನು ಬಿಟ್ಟಿಲ್ಲ; ಬಿಡುವುದೂ ಇಲ್ಲ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದರು. ವಿಶೇಷ ಅಧಿವೇಶನದಲ್ಲಿ ಭಾನುವಾರ ಮಾತನಾಡಿದ ಅವರು, ಈ ಹಿಂದಿನ ದೇವೇಂದ್ರ ಫಡ್ನವೀಸ್ ಸರ್ಕಾರಕ್ಕೆ ನಾವೆಂದೂ ದ್ರೋಹ ಮಾಡಿಲ್ಲ. ಅವರಿಂದ ಅನೇಕ ವಿಷಯಗಳನ್ನು ಕಲಿತುಕೊಂಡೆವು. ಈಗಲೂ ಅವರೊಂದಿಗೆ ಸ್ನೇಹವಿದೆ. ನಮ್ಮ ಬೇಡಿಕೆಗೆ ಒಪ್ಪಿದ್ದರೆ ರಾಜ್ಯದಲ್ಲಿ ಇಷ್ಟೊಂದು ರಾಜಕೀಯ ಬೆಳವಣಿಗೆಗಳು ನಡೆಯಲು ಆಸ್ಪದವೇ ಆಗುತ್ತಿರಲಿಲ್ಲ ಎಂದರು. ಸಿಎಂ ಆಗಿದ್ದು ಅದೃಷ್ಟ. ಯಾರು ನಮ್ಮನ್ನು ವಿರೋಧಿಸುತ್ತಿದ್ದರೋ ಅವರ ಬೆಂಬಲದಿಂದಲೇ ಈ ಹುದ್ದೆ ದೊರಕಿದೆ. ನಾವು ಯಾರೊಂದಿಗ 3 ದಶಕ ಇದ್ದೆವೋ ಅವರು ಈಗ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ. ಹೀಗಾಗಿ ಹಳೆಯ ಮಿತ್ರರು ಮತ್ತು ಹೊಸ ಮಿತ್ರರ ಇಬ್ಬರ ಹಾರೈಕೆ ನಮಗಿದೆ ಎಂದರು. ಅವರನ್ನು (ದೇವೇಂದ್ರ ಫಡ್ನವೀಸ್) ಪ್ರತಿಪಕ್ಷದ ನಾಯಕನೆಂದು ಕರೆಯಲಾರೆ; ಅವರು ಜವಾಬ್ದಾರಿಯುತ ನಾಯಕ ಎಂದರು.



ಸ್ಪೀಕರ್ ಪಟೋಲೆ ಜತೆ ಸಿಎಂ ಉದ್ಧವ್ ಠಾಕ್ರೆ.

### ಉದ್ಯೋಗ ಮೀಸಲು

ವಿಶೇಷ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲ ಭಗತ್ ಸಿಂಗ್ ಕೊಶ್ಯಾರಿ ಭಾಷಣ ಮಾಡಿದ್ದು, ಎಂವಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿರುವ ಖಾಸಗಿ ವಲಯದಲ್ಲಿ ಸ್ಥಳೀಯರಿಗೆ ಶೇ. 80 ಉದ್ಯೋಗ ಮೀಸಲು, ₹ 10ಕ್ಕೆ ಊಟ, ₹ 1ಕ್ಕೆ ಆರೋಗ್ಯ ತಪಾಸಣೆಯ ಕ್ಲಿನಿಕ್, ಜಿಲ್ಲಾ ಕೇಂದ್ರಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಸ್ಥಾಪನೆಗೆ ಆದ್ಯತೆ ನೀಡಲಾಗಿದೆ ಎಂದಿದ್ದಾರೆ.

9